# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಹೆಚ್.ಎಸ್.ಗೋಪಿನಾಥ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 585 |
| ಉತ್ತರಿಸಬೇಕಾದ ದಿನಾಂಕ | : | 11-03-2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1) ವಿವಿಧ ರೀತಿಯ ಸಹಕಾರ ಸಂಘಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಲು ಅವರ ಪರವಾಗಿ ಸರ್ಕಾರದಿಂದ ಷೇರು ಸಹಾಯಧನವನ್ನು ನೀಡುವ ಯೋಜನೆಯನ್ನು ಸರ್ಕಾರದಿಂದ ಅನುಷ್ಠಾನಗೊಳಿಸಲಾಗಿದೆ.<br>2) ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರಲ್ಲಿ 02 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ.<br>3) ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವ ಮಹಿಳಾ ಅಭ್ಯರ್ಥಿಗಳಿಗೆ ಚುನಾವಣಾ ಠೇವಣಿಯಲ್ಲಿ ಶೇ.50 ರಷ್ಟು ರಿಯಾಯಿತಿ ಅವಕಾಶ ಕಲ್ಪಿಸಲಾಗಿರುತ್ತದೆ.<br>4) ಮಹಿಳಾ ಸಹಕಾರ ಸಂಘಗಳ ನೋಂದಣಿ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ಸೌಲಭ್ಯವಿರುತ್ತದೆ.<br>5) ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಮಹಿಳೆಯರು ಕನಿಷ್ಠ 10 ಮತ್ತು ಗರಿಷ್ಠ 20 ಸದಸ್ಯರನ್ನು ಒಳಗೊಂಡ ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಂಡು ಪ್ರಾಥಮಿಕ ಕೃಷಿ |

| | | |
|---|---|---|
| | | ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ತೆರೆದು ಉಳಿತಾಯವನ್ನು ಕೈಗೊಳ್ಳಲು ಉತ್ತೇಜಿಸುವುದು ಮತ್ತು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪುಗಳಿಗೆ ಅವಶ್ಯವಿರುವ ಸಾಲವನ್ನು ಒದಗಿಸುವುದು.<br><br>6) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳದ ಕಾರ್ಯವ್ಯಾಪ್ತಿಯ 16 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 4693 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 13.61 ಲಕ್ಷ ಹಾಲು ಉತ್ಪಾದಕ ಮಹಿಳಾ ಸದಸ್ಯರು ನೋಂದಣಿಯಾಗಿದ್ದು, ಇದರಲ್ಲಿ 4.45 ಲಕ್ಷ ಉತ್ಪಾದಕರು ಸಕ್ರಿಯ ಸದಸ್ಯರಾಗಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುತ್ತಿರುತ್ತಾರೆ. ಈ ಸದಸ್ಯರುಗಳಿಗೆ ಹೈನುಗಾರಿಕೆಯನ್ನು ಉತ್ತೇಜಿಸಲು ಕರ್ನಾಟಕ ಸಹಕಾರಿ ಹಾಲು ಮಹಾಮಂಡಳ ಮತ್ತು ರಾಜ್ಯ ಸರ್ಕಾರದ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆರವರು ಪ್ರತಿ ವರ್ಷ 250 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಆಯ್ಕೆ ಮಾಡಿ ಅದರಲ್ಲಿ ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ-ಸಹಾಯ ಗುಂಪು, ಒಕ್ಕೂಟ, ವಿವಿಧ ಬಗೆಯ ಉತ್ಪಾದಕರ ಗುಂಪುಗಳ ಮತ್ತು ಉತ್ಪಾದಕ ಸಂಸ್ಥೆಗಳ ಮೂಲಕ ಸಂಘಟಿಸಿ ಕೃಷಿ, ಹೈನುಗಾರಿಕೆ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವ ಧ್ಯೇಯ ಹೊಂದಿದ್ದು, ಇದರಿಂದ ಹೈನುಗಾರಿಕೆಯನ್ನು ಉತ್ತೇಜಿಸಿದಂತಾಗಿರುತ್ತದೆ. |

| | | |
|---|---|---|
| ಆ) | ಹಿಂದುಳಿದ ವರ್ಗಗಳ ವಿಶೇಷವಾಗಿ ಮಹಿಳೆಯರ ಆದಾಯ ಉತ್ಪಾದನೆಗೆ ಅವಕಾಶಗಳನ್ನು ಸೃಷ್ಟಿಸಲಾಗಿದೆಯೇ; | ಹೌದು,<br><br>1) ಮಹಿಳಾ ಸ್ವ-ಸಹಾಯ ಗುಂಪುಗಳು ಸ್ವಂತ ಉದ್ಯೋಗವನ್ನು ಕೈಗೊಂಡು ಆದಾಯ ವೃದ್ಧಿಸಲು ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮತ್ತು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳ ವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವಿತರಿಸಲಾಗುತ್ತದೆ.<br><br>2) ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದ 16 ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕ ಮಹಿಳಾ ಸದಸ್ಯರುಗಳಿಗೆ ವಿಶೇಷವಾಗಿ ಹಿಂದುಳಿದ ವರ್ಗಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ವಿಧವ ಮಹಿಳೆಯರಿಗೆ ಹೈನುಗಾರಿಕೆಯನ್ನು ಉತ್ತೇಜಿಸಿ ಮಹಿಳೆಯರಿಗೆ ಆರ್ಥಿಕತೆಯನ್ನು ಹೆಚ್ಚಿಸಲು ಸರ್ಕಾರವು ಹಾಗೂ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದಿಂದ ಹೈನುರಾಸು ಖರೀದಿಗಾಗಿ ಬಡ್ಡಿ ರಹಿತ, ಸುತ್ತು ನಿಧಿಯನ್ನು ಸಾಲದ ರೂಪದಲ್ಲಿ ನೀಡಲಾಗುವುದು ಅಲ್ಲದೆ, ವಿವಿಧ ರೀತಿಯ ತಾಂತ್ರಿಕ ತರಬೇತಿಗಳನ್ನು ಮತ್ತು ಅರಿವು ಕಾರ್ಯಕ್ರಮಗಳಾದ ಆರೋಗ್ಯ ಮತ್ತು ಪೌಷ್ಠಿಕ ಆಹಾರ, ಶುದ್ಧ ಹಾಲು ಉತ್ಪಾದನೆ, ಪಶು ಆಹಾರ ಮತ್ತು ಮೇವು ಅಭಿವೃದ್ಧಿ, ಲಿಂಗ ಸೂಕ್ಷ್ಮತೆ, ಕಾನೂನು ಸಾಕ್ಷರತೆಗಳ ಬಗ್ಗೆ ಅರಿವು ಮೂಡಿಸಲಾಗುವುದು. ವಿಶೇಷವಾಗಿ ಮಹಿಳೆಯರಿಗೆ ಶೈಕ್ಷಣಿಕ ಅಧ್ಯಯನ ಪ್ರವಾಸವನ್ನು ಕೈಗೊಂಡು ಹೈನುಗಾರಿಕೆಯ ಆಧುನಿಕತೆಯ ಬಗ್ಗೆ ಗುಜರಾತಿನ ಅಮೂಲ್ ಗೆ ಕಳುಹಿಸಿಕೊಡುವ ಮುಖಾಂತರ ಹೈನುಗಾರಿಕೆಯನ್ನು ವೃದ್ಧಿಸಿಕೊಂಡು ಮಹಿಳೆಯರ ಆದಾಯವನ್ನು ಹೆಚ್ಚಿಸಲು ಸಹಾಯಕವಾಗಿರುತ್ತದೆ. |

| | | |
|---|---|---|
| ಇ) | ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ; (ವಿವರ ಒದಗಿಸುವುದು) | ಹೌದು.<br><br>ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಮಹಿಳಾ ಸ್ವ-ಸಹಾಯ ಗುಂಪುಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವೈಯಕ್ತಿಕ ಮತ್ತು ಕುಟುಂಬ ನಿರ್ವಹಣೆ ಉದ್ದೇಶಕ್ಕಾಗಿ ಪಡೆಯುವ ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮತ್ತು ಸ್ವಂತ ಉದ್ಯೋಗವನ್ನು ಕೈಗೊಂಡು ಆದಾಯ ವೃದ್ಧಿಸಲು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ವಿತರಿಸಲು ಸರ್ಕಾರದಿಂದ ಯೋಜನೆಯನ್ನು ರೂಪಿಸಲಾಗಿದೆ.<br><br>2024-25 ನೇ ಸಾಲಿನಲ್ಲಿ ಜನವರಿ ಅಂತ್ಯದ ವರೆಗೆ 14,807 ಸ್ವ-ಸಹಾಯ ಗುಂಪುಗಳಿಗೆ ರೂ.659.42 ಕೋಟಿಗಳ ಸಾಲವನ್ನು ವಿತರಿಸಲಾಗಿದ್ದು, 93,060 ಸ್ವ-ಸಹಾಯ ಗುಂಪುಗಳಿಂದ ರೂ.1,841.95 ಕೋಟಿ ಸಾಲದ ಹೊರಬಾಕಿ ಹೊಂದಿರುತ್ತದೆ. ಈ ಸಾಲಿನಲ್ಲಿ ವಸೂಲಾಗುವ ಸಾಲಗಳಿಗೆ ಸ್ವ-ಸಹಾಯ ಗುಂಪುಗಳ ಪರವಾಗಿ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ನೀಡಲು ರೂ.124.80 ಕೋಟಿಗಳ ಆಯವ್ಯಯ ಅವಕಾಶ ಒದಗಿಸಲಾಗಿದೆ.<br><br>ಕರ್ನಾಟಕ ಸಹಕಾರಿ ಹಾಲು ಮಹಾಮಂಡಳ ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್. ಸಂಸ್ಥೆ ವತಿಯಿಂದ ದೀನ ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್.ಆರ್.ಎಲ್.ಎಂ) ಕಾರ್ಯಕ್ರಮಗಳನ್ನು 2011-12ನೇ ಸಾಲಿನಿಂದ ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದ್ದು, ಅನುಷ್ಠಾನ ಸಂಬಂಧ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹೊರಡಿಸಿರುವ ಆದೇಶದ ಪ್ರತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |

<table>
<tr>
<td></td>
<td></td>
<td>
ರಾಜ್ಯ ಸರ್ಕಾರವು ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದರಲ್ಲಿ ಗ್ರಾಮೀಣ ಮಹಿಳೆಯರು ಒಳಗೊಂಡಿರುತ್ತಾರೆ.
ಸದರಿ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಿದ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ವರ್ಷ</th><th>ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ)</th><th>ಮಹಿಳೆಯರ ಸಂಖ್ಯೆ</th></tr>
<tr><td>2021–22</td><td>63.04</td><td>13,160</td></tr>
<tr><td>2022–23</td><td>24.85</td><td>4847</td></tr>
<tr><td>2023–24</td><td>23.09</td><td>4848</td></tr>
<tr><td>2024–25 (ಈವರೆಗೆ)</td><td>15.74</td><td>3343</td></tr>
</table>
</td>
</tr>
<tr>
<td>ಈ)</td>
<td>ಸರ್ಕಾರವು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡುತ್ತಿದೆಯೇ; (ವಿವರ ಒದಗಿಸುವುದು)</td>
<td>
ಸಹಕಾರ ಇಲಾಖೆಯು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲು ಯಾವುದೇ ಯೋಜನೆ ರೂಪಿಸಿರುವುದಿಲ್ಲ. ಆದರೆ ಸಹಕಾರ ಸಂಘಗಳಲ್ಲಿ ರಚಿಸಿರುವ ಸ್ವ-ಸಹಾಯ ಗುಂಪುಗಳ ಸದಸ್ಯರನ್ನು ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್.ಆರ್.ಎಲ್.ಎಮ್) ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿಸಿರುವ ಸ್ವ-ಸಹಾಯ ಗುಂಪುಗಳ ಫೆಡೆರೇಷನ್‌ಗಳಲ್ಲಿ ಸದಸ್ಯತ್ವವನ್ನು ಪಡೆದು ಎನ್.ಆರ್.ಎಲ್.ಎಮ್ ಯುನಿಕ್ ಕೋಡ್ ಗಳನ್ನು ನೀಡುವುದರ ಮೂಲಕ ಸದಸ್ಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲಾಗುತ್ತಿದೆ.
ಇದಲ್ಲದೇ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತವೆ.
</td>
</tr>
</table>

| | | |
|---|---|---|
| | | 1. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚಿಸಲು ಮತ್ತು ಅವರ ಸಾಲವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದನ್ನು ನಿರ್ವಹಿಸಲು ಪ್ರತ್ಯೇಕವಾಗಿ ಕ್ಷೇತ್ರ ವೀಕ್ಷಕರನ್ನು ನೇಮಕ ಮಾಡಲಾಗಿದೆ.<br><br>2. ಕೌಶಲ್ಯಾಭಿವೃದ್ಧಿ ಇಲಾಖೆಯ ಮತ್ತು ವಿವಿಧ ಇಲಾಖೆಗಳಿಂದ ಆಯೋಜನೆಗೊಳಿಸುತ್ತಿರುವ ಮೇಳಗಳಲ್ಲಿ ಸಹಕಾರ ಸಂಸ್ಥೆಗಳು ರಚಿಸಿದ ಸ್ವ-ಸಹಾಯ ಗುಂಪುಗಳ ಸಿದ್ಧ ವಸ್ತುಗಳನ್ನು ಸಹ ಪ್ರದರ್ಶಿಸಲು ಕ್ರಮ ಜರುಗಿಸಲಾಗುತ್ತಿದೆ. ಇದಲ್ಲದೆ ಕೇಂದ್ರ ಸರ್ಕಾರದ GEM (Government e-Market place) Portal ಅನ್ನು ಸಹಕಾರ ಸಂಘಗಳು ಸಹ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.<br><br>3. ಅಮೇಜಾನ್‌ನಂತಹ ಖಾಸಗಿ e-commerce ಸಂಸ್ಥೆಗಳ ಮೂಲಕವೂ ಸಹ ಮಹಿಳಾ ಸ್ವ-ಸಹಾಯ ಗುಂಪುಗಳು ಸಿದ್ಧಪಡಿಸಿರುವ ವಸ್ತುಗಳನ್ನು ಮಾರಾಟ ಮಾಡಲು ಸಂಬಂಧಪಟ್ಟ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಮೂಲಕ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ತರಬೇತಿ ನೀಡಲಾಗಿದೆ.<br><br>4. ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ರಚಿಸಿದ RUDSET (Rural Development and Self Employment Training Institute) ಮೂಲಕ ಸ್ವ-ಸಹಾಯ ಗುಂಪುಗಳಿಗೆ ವಿವಿಧ ಸ್ವಂತ ಉದ್ಯೋಗಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ ಹಾಗೂ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ತರಬೇತಿ ಸಂಸ್ಥೆಗಳಲ್ಲಿ ಸ್ವ- ಸಹಾಯ ಗುಂಪುಗಳಿಗೆ ತರಬೇತಿ ನೀಡಲು ಜಿಲ್ಲಾ ಸಹಕಾರ |

| | | |
|---|---|---|
| | | ಬ್ಯಾಂಕುಗಳಿಗೆ ನಿಬಂಧಕರು ಸೂಚನೆ ನೀಡಿರುತ್ತಾರೆ.<br><br>5. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚಿಸಿ ಗ್ರಾಮ ಮಟ್ಟದಲ್ಲಿ ಪಂಚಾಯಿತಿ ಮೂಲಕ ನೋಂದಾಯಿಸಿಕೊಂಡು ಸರ್ಕಾರದ ಕೌಶಲ್ಯಾಭಿವೃದ್ಧಿ ಸೌಲಭ್ಯವನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಪಡೆಯುತ್ತಿರುತ್ತಾರೆ. |
| ಉ) | ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯಾಭಿವೃದ್ಧಿಗೆ ಸರ್ಕಾರ ಪರಿಗಣಿಸಿ ಕ್ರಮಕೈಗೊಳ್ಳುವುದೇ? | ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯಾಭಿವೃದ್ಧಿಗೆ ಸರ್ಕಾರ ಮೇಲಿನಂತೆ ಈಗಾಗಲೇ ಕ್ರಮ ವಹಿಸಲಾಗಿರುತ್ತದೆ. |

**ಸಂಖ್ಯೆ: ಸಿಒ 53 ಸಿಎಲ್‌ಎಸ್ 2025**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ

ಕರ್ನಾಟಕ ಸರ್ಕಾರ

ಸತ್ಯಮೇವ ಜಯತೆ

**ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | Department of Skill Development, Entrepreneurship and Livelihood

ನಂ.4, 2ನೇ ಮತ್ತು 3ನೇ ಮಹಡಿ, ಮೈಶುಗರ್ ಕಟ್ಟಡ, ಜೆ.ಸಿ.ರಸ್ತೆ, ರವೀಂದ್ರ ಕಲಾ ಕ್ಷೇತ್ರದ ಎದುರು, ಬೆಂಗಳೂರು-560002.
ದೂರವಾಣಿ: 080-23564271. ಇ-ಅಂಚೆ: nrlmkarnataka@gmail.com

No 4, 2nd& 3rd floor, My Sugar Building, JC road,
Opp to Ravindra Kala Kshetra, Bangalore –560002
Ph No: 080-23564271, e-mail: nrlmkarnataka@gmail.com

ಸಂಖ್ಯೆ:ಕೆಎಸ್‌ಆರ್‌ಎಲ್‌ಪಿಎಸ್/ಎಲ್‌ಹೆಚ್/ಕ್ಷೀ.ಸಂ–4/36/2022–23 ದಿನಾಂಕ:29–01–2024

## ಮಂಜೂರಾತಿ ಆದೇಶ

ವಿಷಯ: 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ: 03.03.2023.

2. ದಿನಾಂಕ:22.01.2024ರಂದು ಪರಸ್ಪರ ಒಪ್ಪಿ ಮಾಡಿಕೊಂಡ ಒಡಂಬಡಿಕೆ (MoU)ರಂತೆ.

----*/*/*----

12/2

D-2

12/2

SDO/step

ಪ್ರಸ್ತಾವನೆ:-

ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ ವತಿಯಿಂದ ದೀನ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ–ಎನ್‌ಆರ್‌ಎಲ್‌ಎಂ) ಕಾರ್ಯಕ್ರಮಗಳನ್ನು 2011–12ನೇ ಸಾಲಿನಿಂದ ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದೆ.

ಗ್ರಾಮೀಣ ಜನರ ಬಡತನ ನಿವಾರಣೆ ಮಾಡುವುದು ಈ ಅಭಿಯಾನದ ಮುಖ್ಯ ಗುರಿಯಾಗಿದ್ದು, ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ–ಸಹಾಯ ಗುಂಪು, ಒಕ್ಕೂಟ, ವಿವಿಧ ಬಗೆಯ ಉತ್ಪಾದಕರ ಗುಂಪುಗಳ ಮತ್ತು ಉತ್ಪಾದಕ ಸಂಸ್ಥೆಗಳ ಮೂಲಕ ಸಂಘಟಿಸಿ, ಕೃಷಿ, ಹೈನುಗಾರಿಕೆ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ಧ್ಯೇಯ ಹೊಂದಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಮತ್ತು ಕೆಎಂಎಫ್ ಸಹಯೋಗದೊಂದಿಗೆ ರಾಜ್ಯದ **15** ಹಾಲು ಉತ್ಪಾದಕರ ಒಕ್ಕೂಟಗಳ ವ್ಯಾಪ್ತಿಯ ಜಿಲ್ಲೆಗಳಲ್ಲಿ **3** ಹಂತಗಳ ಕ್ಷೀರ ಸಂಜೀವಿನಿ ಯೋಜನೆಯಡಿ ಒಟ್ಟು **573** ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳನ್ನು ಅಳವಡಿಸಿ ಸುಮಾರು **22920** ಮಹಿಳೆಯರಿಗೆ ಕೆಎಂಎಫ್ ಮೂಲಕ ವಿವಿಧ ತಾಂತ್ರಿಕ ಕೌಶಲ್ಯಾಭಿವೃದ್ಧಿ, ಸಾಮಾಜಿಕ ಮತ್ತು ಆರ್ಥಿಕ ಬಲವರ್ಧನೆಗೆ ಪೂರಕವಾದ ತರಬೇತಿಗಳು ಮತ್ತು ಅಗತ್ಯ ಆರ್ಥಿಕ ಸಹಾಯ ಕಲ್ಪಿಸಿಕೊಡಲಾಗುತ್ತಿದೆ.

2022–23ನೇ ಮತ್ತು 2023–24ನೇ ಸಾಲಿನ ಡೇ–ಎನ್‌ಆರ್‌ಎಲ್‌ಎಂ ಕಾರ್ಯಕ್ರಮಗಳ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯನ್ವಯ **250** ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಮೂಲಕ **10000** ದುರ್ಬಲ ವರ್ಗದ ಮಹಿಳೆಯರನ್ನು **"4ನೇ ಹಂತರ ಕ್ಷೀರ ಸಂಜೀವಿನಿ ಯೋಜನೆ"**ಯಡಿ ಆವರಿಸಲು ಯೋಜಿಸಲಾಗಿದೆ. ಈ ಯೋಜನೆಯಡಿ ಯೋಜಿಸಿರುವ

ಚಟುವಟಿಕೆ/ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಉಲ್ಲೇಖ (I) ರಂತೆ ಒಟ್ಟು ರೂ.2061.14 ಲಕ್ಷಗಳಿಗೆ ಅಂದಾಜಿಸಲಾಗಿದೆ. ಇದರಲ್ಲಿ ಡೇ-ಎನ್‌ಆರ್‌ಎಲ್‌ಎಂನ ಪಾಲು ರೂ.1228.53 ಲಕ್ಷಗಳು ಮತ್ತು ಕೆಎಂಎಫ್ ಮತ್ತು ಜಿಲ್ಲಾ ಒಕ್ಕೂಟಗಳ ಪಾಲು ರೂ.832.57 ಲಕ್ಷಗಳು ಎಂದು ನಿಗಧಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮುಂದುವರೆದು, ದಿನಾಂಕ:22.01.2024 ರಂದು ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್ ರವರೊಂದಿಗೆ ಒಡಂಬಡಿಕೆ (MoU) ಪತ್ರಕ್ಕೆ ಪರಸ್ಪರ ಒಪ್ಪಿ ಸಹಿ ಮಾಡಲಾಗಿದೆ. ಅದರಂತೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅನುಬಂಧ-1 ರನ್ವಯ ಯೋಜಿತ ಕಾರ್ಯಕ್ರಮಗಳನ್ನು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮತ್ತು ಕೆಎಂಎಫ್‌ನ ಸಹಯೋಗದೊಂದಿಗೆ ಪರಿಣಾಮಕಾರಿಯಾಗಿ ಮತ್ತು ನಿಗಧಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2023-24ನೇ ಸಾಲಿನ ಹೈನುಗಾರಿಕೆ ಚಟುವಟಿಕೆಗಳನ್ನು ಕೆಎಂಎಫ್ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯತ್/ ಗ್ರಾಮಗಳಲ್ಲಿ 250 ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಮೂಲಕ 10000 ದುರ್ಬಲ ವರ್ಗದ ಮಹಿಳೆಯರನ್ನು 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ದಿನಾಂಕ:22.01.2024 ರಂದು ಒಡಂಬಡಿಕೆ (MoU) ಮಾಡಿಕೊಳ್ಳಲಾಗಿದೆ. ಅದರಂತೆ ಮಹಿಳಾ ರೈತರಿಗೆ ಅಗತ್ಯ ತರಬೇತಿ, ಶೈಕ್ಷಣಿಕ ಪ್ರವಾಸ, ಹೈನುರಾಸು ಖರೀದಿ ಮತ್ತು ಇತರೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಮತ್ತು ಕಾಲಮಿತಿಯಲ್ಲಿ ಅನುಷ್ಠಾನ ಮಾಡಲು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್‌ನ ಪಾಲು ರೂ.1228.53 ಲಕ್ಷಗಳು ಮತ್ತು ಕೆಎಂಎಫ್‌ನ ಪಾಲು ರೂ.832.57 ಲಕ್ಷಗಳು ಒಟ್ಟಾರೆ ಮೊತ್ತ ರೂ.2061.10 ಲಕ್ಷಗಳ ಅನುದಾನವನ್ನು ಕ್ರಿಯಾ ಯೋಜನೆ ಮತ್ತು ಬೇಡಿಕೆ ಆಧಾರದ ಮೇಲೆ ಬಿಡುಗಡೆ ಮಾಡಲು ಈ ಕೆಳಕಂಡ ಕಾರ್ಯಚರಣೆ ಕಾಯತಂತ್ರ/ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

**ಕಾರ್ಯಚರಣೆ ಕಾರ್ಯತಂತ್ರ/ಷರತ್ತುಗಳು.**

1. ಯೋಜನೆಯಡಿ ಆಯ್ಕೆ ಮಾಡುವ ಗ್ರಾಮ ಪಂಚಾಯತ್/ಗ್ರಾಮಗಳನ್ನು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್‌ನ ಆಯಾಯ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕಗಳ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸುವುದು.

2. ಮಹಿಳಾ ಸಹಕಾರಿ ಹಾಲು ಉತ್ಪಾದಕರ ಗುಂಪುಗಳಲ್ಲಿ ಕಡು ಬಡವರು, ದುರ್ಬಲ ವರ್ಗದ ಮಹಿಳೆಯರಾದ ವಿಧವೆಯರು, ಒಂಟಿ ಮಹಿಳೆಯರು, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದವರು, ಕನಿಷ್ಠ ಮಂಗಳ ಮುಖಿಯರು, ಅಲ್ಪಸಂಖ್ಯಾತ ಮತ್ತು ಇಡಬ್ಲ್ಯೂಎಸ್ ಮಹಿಳೆಯರಿಗೆ ಆದ್ಯತೆ ನೀಡುವುದು.

3. ಪರಿಶಿಷ್ಠ ಜಾತಿ (ಕನಿಷ್ಠ 15%), ಪರಿಶಿಷ್ಠ ಪಂಗಡ, ಕನಿಷ್ಠ (7.5%) ಅಲ್ಪಸಂಖ್ಯಾತ ಮತ್ತು ಇಡಬ್ಲ್ಯೂಎಸ್ (ಕನಿಷ್ಠ 10%) ಮಹಿಳೆಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೀಸಲಾತಿ ನಿಯಮಾನುಸಾರ ಆದ್ಯತೆ ನೀಡಿ ಗರಿಷ್ಠ ಪ್ರಯಾಣದಲ್ಲಿ ಯೋಜನೆಯಡಿ ಆವರಿಸುವುದು.

4. ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಡಬ್ಲ್ಯೂಡಿಸಿಎಸ್‌ಗಳನ್ನು (ಕನಿಷ್ಠ 82) 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅಳವಡಿಸಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳುವುದು.

5. ಯೋಜನೆಯ ಪರಿಣಾಮಕಾರಿ ಮತ್ತು ನಿಗಧಿತ ಕಾಲಮಿತಿಯ ಅನುಷ್ಠಾನಕ್ಕಾಗಿ ಕ್ಷೀರ ಸಂಜೀವಿನಿ ಯೋಜನೆ ಹೆಸರಿನಲ್ಲಿ ಪ್ರತ್ಯೇಕವಾಗಿ ವಿಭಾಗ ರಚಿಸಿ ಅಗತ್ಯವಿರುವ ಸಮರ್ಪಿತ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸುವುದು ಮತ್ತು ವಿವರವನ್ನು ಈ ಕಛೇರಿಗೆ ಸಲ್ಲಿಸುವುದು.

5. ಯೋಜನೆಯಲ್ಲಿ ಪ್ರಸ್ತಾಪಿಸಿರುವ ಚಟುವಟಿಕೆಗಳು/ಕಾರ್ಯಕ್ರಮಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನ ಮಾಡಲು ಮಾಸಿಕ ಕ್ರಿಯಾ ಯೋಜನೆ ಮತ್ತು ಕಾಲಾನುಕ್ರಮ (Action plan and time line) ಯೋಜನೆಯನ್ನು ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್‌ಗೆ ಸಲ್ಲಿಸುವುದು.

6. ಮಾಸಿಕ ಪ್ರಗತಿ ವರದಿ ಮತ್ತು ಕ್ರಿಯಾ ಯೋಜನೆಯನ್ನು ಪ್ರತಿ ತಿಂಗಳ 10ನೇ ತಾರೀಖಿನೊಳಗೆ ತಪ್ಪದೇ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.

7. ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಗರಿಷ್ಠ ಪ್ರಮಾಣದ ಅನುಕೂಲ ಕಲ್ಪಿಸಲು "ಪಶು ಸಂಗೋಪನಾ" ಇಲಾಖೆಯ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಲು ಕಾರ್ಯತಂತ್ರ ರೂಪಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

8. ಮೊದಲನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ತೆರೆದಿರುವ ಉಳಿತಾಯ ಖಾತೆಯನ್ನು 4ನೇ ಹಂತದ ಯೋಜನೆಗೂ ಬಳಸಿಕೊಳ್ಳುವುದು.

9. ಯೋಜನೆಯ ಅವಧಿ:– ಮೊದಲನೇ ಕಂತಿನ ಅನುದಾನ ಬಿಡುಗಡೆಯಾದ ದಿನಾಂಕದಿಂದ 18 ತಿಂಗಳು ಮಾತ್ರ, ಆದರೆ, ಎಲ್ಲಾ 40 ಆದ್ಯತಾ ಗುಂಪಿನ ಮಹಿಳೆಯರು ಹೈನುರಾಸು ಖರೀದಿಸುವವರೆಗೂ ಅಗತ್ಯ ಸಹಕಾರವನ್ನು ವಿಸ್ತರಿಸುವುದು/ ನೀಡುವುದು.

10. ಮಹಿಳಾ ಹಾಲು ಉತ್ಪಾದಕರ ಗುಂಪಿನಲ್ಲಿರುವ 40 ಸದಸ್ಯರುಗಳು ಮೊದಲನೇ ಸುತ್ತಿನಲ್ಲಿ ಹೈನುರಾಸು ಖರೀದಿಸಿದ ನಂತರ, ಜೀವನೋಪಾಯ ನಿಧಿ ಶೀರ್ಷಿಕೆಯಡಿ ಪ್ರತಿ ಗುಂಪಿಗೆ [illegible]

ಮಾಡುವ ಅನುದಾನವನ್ನು ಮರು ಬಳಕೆ ಮಾಡಲು ಅಭಿಯಾನ ನಿರ್ದೇಶಕರು ನೀಡುವ ಆದೇಶದಂತೆ ಕ್ರಮವಹಿಸುವುದು.

11. ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆಯಾದ ಅನುದಾನವನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸದೇ ಮಂಜೂರಾದ ಉದ್ದೇಶಕ್ಕೆ ಮಾತ್ರ ಬಳಸುವುದು.

12. ಯೋಜನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಆಗಿಂದಾಗ್ಗೆ ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ನೀಡುವ ಸಲಹೆ ಸೂಚನೆಗಳನ್ವಯ ಅನುಷ್ಠಾನ ಕಾರ್ಯ ಕೈಗೊಳ್ಳುವುದು.

13. ಪ್ರತೀ ತ್ರೈಮಾಸಿಕ 10ನೇ ತಾರೀಖಿನೊಳಗೆ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ ನಿಯಮಿತವಾಗಿ ಸಲ್ಲಿಸುವುದು.

14. ಯೋಜನೆಯಡಿ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ವೋಚರ್‌ಗಳು/ ಬಿಲ್ಲುಗಳನ್ನು ನಿರ್ವಹಿಸುವುದು, ಅಗತ್ಯವೆನಿಸಿದಾಗ ಸದರಿ ಬಿಲ್ಲುಗಳನ್ನು ಈ ಕಛೇರಿಗೆ ಸಲ್ಲಿಸಬೇಕಾಗುತ್ತದೆ.

15. ಅಭಿಯಾನ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಸುವ ಪ್ರಗತಿ ಪರೀಶೀಲನಾ ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಿರಿಯ ಅಧಿಕಾರಿಗಳು ಹಾಜರಾಗುವುದು.

16. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವ ಪ್ರಗತಿ ಪರೀಶೀಲನಾ ಸಭೆಗಳಿಗೆ ಅಗತ್ಯ ಮಾಹಿತಿಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು/ ಸಿಬ್ಬಂದಿಗಳು ತಪ್ಪದೇ ಹಾಜರಾಗುವುದು.

17. ಕ್ಷೀರ ಸಂಜೀವಿನಿ ಯೋಜನೆಯಡಿ ಆಯ್ಕೆ ಮಾಡುವ ಮಹಿಳಾ ಫಲಾನುಭವಿಗಳು ಸ್ವ–ಸಹಾಯ ಗುಂಪಿನಲ್ಲಿ ಸದಸ್ಯತ್ವ ಹೊಂದಿರುವುದು ಕಡ್ಡಾಯ.

18. ಗುಂಪಿನ ಪ್ರತಿ ಸದಸ್ಯರ ಮಾಹಿತಿಯನ್ನು ಡೇ–ಎನ್‌ಆರ್‌ಎಲ್‌ಎಂನ ಎಂಐಎಸ್‌ನಲ್ಲಿ ನಿಗದಿತ ಸಮಯದಲ್ಲಿ ಎಂಟ್ರಿ ಮಾಡಲು ಅನುಕೂಲವಾಗುವಂತೆ ಅಗತ್ಯ ಮಾಹಿತಿಯನ್ನು ಆಯಾ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ಒದಗಿಸುವುದು ಮತ್ತು ಲೋಕೋಸ್‌ನಲ್ಲಿ ಎಂಟ್ರಿ ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

19. ಯೋಜನೆಯಡಿ ಅಳಡಿಸಿಕೊಳ್ಳುವ ಎಲ್ಲಾ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಸುಸ್ಥಿರತೆ ಮತ್ತು ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿ ಕೆಎಂಎಫ್ ವತಿಯಿಂದ ಅಗತ್ಯವಿರುವ ಕಡೆ ಸೋಲಾರ್ ಪ್ಯಾಕ್, ಎಎಂಸಿಯು, ಇಲೆಕ್ಟ್ರಾನಿಕ್ ತೂಕದ ಯಂತ್ರ, ಸಂಘದ ಕಟ್ಟಡ ನಿರ್ಮಾಣ ಮತ್ತು ಇತ್ಯಾದಿ ಮೂಲಭೂತ ಸೌಲಭ್ಯ / ಸೌಕರ್ಯಗಳನ್ನು ಒದಗಿಸಿಕೊಡಲು ತಮ್ಮ ಹಂತದಲ್ಲಿ ನಿರ್ಧಾರ ತೆಗೆದುಕೊಂಡು ಸೂಕ್ತ ಕಾರ್ಯತಂತ್ರ ರೂಪಿಸಿ ಸಮಗ್ರವಾಗಿ ಅಭಿವೃದ್ಧಿ ಮಾಡಲು ಕ್ರಮವಹಿಸುವುದು.

20. ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ಅಥವಾ ತಮ್ಮ ಸಂಸ್ಥೆವತಿಯಿಂದ ಹೊಸದಾಗಿ ರಚಿಸುವ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳನ್ನು ಮೊದಲನೇ ಪ್ರಾಶಸ್ತ್ಯದಲ್ಲಿ 4ನೇ ಹಂತದ ಯೋಜನೆಯಡಿ ಒಳಪಡಿಸಿಕೊಳ್ಳುವುದು.

21. ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳಲ್ಲಿ ನಡೆಸಲು ಯೋಜಿಸಿರುವ ಓರಿಯೇಂಟೇಶನ್ ಕಾರ್ಯಕ್ರಮಗಳಲ್ಲಿ ಸಂಜೀವಿನಿ-ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ವಿವಿಧ ಹಂತದ ಸಿಬ್ಬಂದಿಗಳು ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಬಳಸಿಕೊಂಡು ಕಾರ್ಯಕ್ರಮಗಳನ್ನು [illegible] ಸಹಕಾರಿಯಾಗಿ ಆಯೋಜಿಸುವುದು.

22. 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿಯ ಮಹಿಳಾ ಫಲಾನುಭವಿಗಳಿಗೆ ಮತ್ತು [illegible] ಅಡಿ ಆಯ್ಕೆಗೊಂಡಿರುವ ಫಲಾನುಭವಿ ಮಹಿಳೆಯರಿಗೆ ಡೇರಿಗೆ ಸಂಬಂಧಿಸಿದ ಉತ್ಪನ್ನಗಳ ಮೌಲ್ಯವರ್ಧನೆ ಮಾಡಲು ಕೆಎಂಎಫ್ ವತಿಯಿಂದ ಅಗತ್ಯ ತಂತ್ರಜ್ಞಾನ ಮತ್ತು ತರಬೇತಿಯನ್ನು ನೀಡುವುದು.

23. ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ಸ್ಥಾಪಿಸಲು ಉದ್ಧೇಶಿರುವ ಸಂಜೀವಿನಿ ಸೂಪರ್ ಮಾರ್ಕೆಟ್ ಮಾರಾಟ ಮಳಿಗೆಗಳಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯವಿರುವ ಉತ್ಪನ್ನಗಳನ್ನು ಕೆಎಂಎಫ್ ವತಿಯಿಂದ ನೇರವಾಗಿ ಸರಬರಾಜು ಮಾಡಲು ಸೂಕ್ತ ಕಾರ್ಯತಂತ್ರ [illegible].

24. ಕಾಫಿ ಮಂಡಳಿ ಮತ್ತು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಹಯೋಗದೊಂದಿಗೆ ರಾಜ್ಯದ ವಿವಿಧ ಸ್ಥಳಗಳಲ್ಲಿ ವಾಣಿಜ್ಯ ಕಾಫೀ ಮಳಿಗೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಸದರಿ ಮಳಿಗೆಗಳಲ್ಲಿ ಕಾಫಿ ತಯಾರಿಕೆಗೆ ಅಗತ್ಯವಿರುವ ಹಾಲನ್ನು ಸ್ಥಳೀಯ ಸೊಸೈಟಿಗಳ ಮೂಲಕ ಒದಗಿಸಲು ಇರುವ ಅವಕಾಶಗಳ ಬಗ್ಗೆ ತಿಳಿಸುವುದು.

25. ಯೋಜನೆ ಅನುಷ್ಠಾನದಲ್ಲಿ ಕಂಡು ಬರುವ ಉತ್ತಮ ಅಭ್ಯಾಸಗಳ ಯಶೋಗಾಥೆಗಳನ್ನು ಸಿದ್ದಪಡಿಸುವುದು. ಛಾಯಾಚಿತ್ರ ಮತ್ತು ವೀಡಿಯೋ ದಾಖಲಾತಿಗಳನ್ನು ಆಗಿಂದಾಗ್ಗೆ ಸಲ್ಲಿಸುವುದು.

ಅಭಿಯಾನ ನಿರ್ದೇಶಕರು,
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್

ಇವರಿಗೆ.

ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್ ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು. ರವರುಗಳಿಗೆ ರವಾನಿಸುತ್ತಾ ಪ್ರತಿ ತಿಂಗಳು ಯೋಜನೆಯ ಪ್ರಗತಿ ಪರಿಶೀಲನೆ ಮಾಡುವಂತೆ ಕೋರಿದೆ.

2. ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
3. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, (ಕಾರ್ಯಾಚರಣೆ), ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
4. ಮುಖ್ಯ ಹಣಕಾಸು ಅಧಿಕಾರಿರವರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
5. ಯೋಜನಾ ನಿರ್ದೇಶಕರು, ಡೇ-ಎನ್‌ಆರ್‌ಎಲ್‌ಎಂ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
6. ಆಯುಕ್ತರು, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು, ಬೆಂಗಳೂರು.
7. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ರವಾನಿಸುತ್ತಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಸದಸ್ಯರುಗಳಿಗೆ ಅಗತ್ಯವಿರುವ ಸಾಲ ಮತ್ತು ಇನ್ನಿತರೆ ಸಹಾಯಧನ ಸೌಲಭ್ಯ ಒದಗಿಸಿಕೊಡುವಂತೆ ತಮ್ಮ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಮತ್ತು ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
8. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ರವರಿಗೆ ರವಾನಿಸುತ್ತಾ ವಿಶೇಷವಾಗಿ ರಚಿಸಿರುವ ಪರಿಶಿಷ್ಟ ಪಂಗಡದ ಮಹಿಳಾ ಹಾಲು ಉತ್ಪಾದಕರ ಗುಂಪು/ಸಂಘಗಳಿಗೆ ಅವಕಾಶವಿರುವ ಅನುದಾನ ಒದಗಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
9. ನಿರ್ದೇಶಕರು, ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ರವಾನಿಸುತ್ತಾ ರಚಿಸಿರುವ ಅಲ್ಪ ಸಂಖ್ಯಾತ ಮಹಿಳಾ ಹಾಲು ಉತ್ಪಾದಕರ ಗುಂಪು/ಸಂಘಗಳಿಗೆ ಅವಕಾಶವಿರುವ ಅನುದಾನ ಒದಗಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
10. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರುಗಳು ಮತ್ತು ಅಪರ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರುಗಳು, ಕೆಎಸ್‌ಅರ್‌ಎಲ್‌ಪಿಎಸ್, ಬೆಂಗಳೂರು ಇವರುಗಳಿಗೆ ರವಾನಿಸುತ್ತಾ, ಉಸ್ತುವಾರಿ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಕ್ಷೀರ ಸಂಜೀವಿನಿ ಯೋಜನೆಯ ಸೊಸೈಟಿಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸಿ ವರದಿ ನೀಡುವುದು.
11. ಕಛೇರಿ ಪ್ರತಿ/ರಕ್ಷಾ ಕಡತ.

ಪ್ರತಿಯನ್ನು ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಅಧ್ಯಕ್ಷರು ಕಾರ್ಯಕಾರಿ ಸಮಿತಿ, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರುರವರ ಆಪ್ತ ಶಾಖೆಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಆಪ್ತ ಶಾಖೆಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.

ಅನುಬಂಧ-1

**2023-24ನೇ ಸಾಲಿನಲ್ಲಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮತ್ತು ಕೆಎಂಎಫ್ ಸಹಯೋಗದಲ್ಲಿ 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅನುಷ್ಠಾನಕ್ಕಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ವಿವರ**

| ಕ್ರ ಸಂ | ಚಟುವಟಿಕೆಗಳು | ಘಟಕ | ಘಟಕ ದರ (ರೂ.ಗಳಲ್ಲಿ) | ಒಟ್ಟು ಘಟಕ | ಒಟ್ಟು ಮೊತ್ತ (ರೂ.ಲಕ್ಷ ಗಳಲ್ಲಿ) | ಎನ್‌ಆರ್ ಎಲ್‌ಎಂ ಪಾಲು (59.61%) | ಕೆಎಂಎಫ್/ ಒಕ್ಕೂಟಗಳ ಪಾಲು (40.41%) | ಶೇಕಡವಾರು ಹೂಡಿಕೆ | | |
|---|---|---|---|---|---|---|---|---|---|---|
| | | | | | | | | **NRLM** | **KMF** | **BOTH** |
| 1 | ಹೈನುರಾಸು ನಿರ್ವಹಣೆ ತರಬೇತಿ (ಗ್ರಾಮ ಮಟ್ಟದಲ್ಲಿ-3 ದಿನ) | 3 | 0.00125 | 10000 | 37.50 | 37.50 | 0.00 | 1.82 | 0.00 | 1.82 |
| 2 | ಮೇಘಾ ಡೇರಿ/ಜಾನುವಾರು ಮೇವು ಘಟಕಕ್ಕೆ ಕ್ಷೇತ್ರ ಭೇಟಿ - (1 ದಿನ) | 1 | 0.00300 | 10000 | 30.00 | 30.00 | 0.00 | 1.46 | 0.00 | 1.46 |
| 3 | ಹೈನುರಾಸು ಖರೀದಿಗೆ ಸಮುದಾಯ ಬಂಡವಾಳ ನಿಧಿ ಹೂಡಿಕೆ | No's | 0.460 | 3500 | 1610.00 | 0 | 563.50 | 50.77 | 27.34 | 78.11 |
| 4 | ಜಾನುವಾರು ವಿಮೆ ಗರಿಷ್ಠ ರೂ. 1000/- (ಪ್ರತಿ ಸದಸ್ಯರಿಗೆ) | No's | 0.01 | 10000 | 100.00 | 0 | 100.00 | 0.00 | 4.85 | 4.85 |
| 5 | ಮೇವು ಮತ್ತು ಮೇವು ಬೆಳೆ ಅಭಿವೃದ್ಧಿ ಕುರಿತ ಅರಿವು ಕಾರ್ಯಕ್ರಮ | 1 | 0.055 | 250 | 13.75 | 8.11 | 5.64 | 0.39 | 0.27 | 0.67 |
| 6 | ಮಹಿಳೆಯರ ಆರೋಗ್ಯ ಮತ್ತು ಪೌಷ್ಠಿಕತೆ ಕುರಿತ ಅರಿವು ಕಾರ್ಯಕ್ರಮ | 1 | 0.055 | 250 | 13.75 | 8.11 | 5.64 | 0.39 | 0.27 | 0.67 |
| 7 | ಲಿಂಗತ್ವ ಸಂವೇದನೆ, ಕಾನೂನು ಸಾಕ್ಷರತೆ ಮತ್ತು ಕೌಟುಂಬಿಕ ಹಿಂಸೆ ಕುರಿತ ಅರಿವು ಕಾರ್ಯಕ್ರಮ | 1 | 0.055 | 250 | 13.75 | 8.11 | 5.64 | 0.39 | 0.27 | 0.67 |
| 8 | ಪಶು ಆರೋಗ್ಯ ಶಿಬಿರ ಮತ್ತು ಬ್ಯಾಂಕ್ ಸಂಪರ್ಕ ಕುರಿತ ಅರಿವು ಕಾರ್ಯಕ್ರಮ | 1 | 0.055 | 250 | 13.75 | 8.12 | 5.64 | 0.39 | 0.27 | 0.67 |
| 9 | ಮಹಿಳಾ ವಿಸ್ತರಣಾ ಅಧಿಕಾರಿ/ಎನ್‌ಜಿಒ ವೇತನ ರೂ. 28000/- ಮತ್ತು ಪ್ರಯಾಣ ಭತ್ಯೆ ರೂ. 4000/- ಪ್ರತಿ ತಿಂಗಳು | 18 | 0.320 | 15 | 86.40 | 0 | 86.40 | 0.00 | 4.19 | 4.19 |
| 10 | ಮೈರಾಡ ಸಂಸ್ಥೆ ಸಿಬ್ಬಂದಿಗಳ ಗೌರವಧನ (3 ಒಕ್ಕೂಟಗಳಲ್ಲಿ ಮಾತ್ರ) | 18 | 0.300 | 3 | 16.20 | 0 | 16.20 | 0.00 | 0.79 | 0.79 |
| 11 | ಮೇಲ್ವಿಚಾರಣೆ ವೆಚ್ಚ ತಿಂಗಳಿಗೆ ರೂ. 20000/- ರಂತೆ 15 ಒಕ್ಕೂಟಗಳಿಗೆ | 18 | 0.200 | 15 | 54.00 | 36.18 | 17.82 | 1.76 | 0.86 | 2.62 |
| 12 | ಪುಸ್ತಕ/ಕೈಪಿಡಿ/ಕರಪತ್ರಗಳ ಮುದ್ರಣ ಮತ್ತು ಇನ್ನಿತರೆ ವೆಚ್ಚಗಳು | LS | LS | 250 | 42.00 | 42.00 | 0.00 | 2.04 | 0.00 | 2.04 |
| 13 | ಆಡಳಿತಾತ್ಮಕ/ಹೆಚ್ಚುವರಿ/ಕಾರ್ಯಾಚರಣೆ ವೆಚ್ಚ (ಕ್ಷೀರ ಸಂಜೀವಿನಿ ಸಿಬ್ಬಂದಿಗಳು) | 18 | 1.667 | 1 | 30.00 | 3.90 | 26.10 | 0.19 | 1.3 | 1.46 |
| | ಒಟ್ಟು | | | | **2061.10** | **182.03** | **832.58** | **59.61** | **40.4** | **100.00** |

| Details of Unions and districtwise Functional DCS, Registered members and Total Active Men and Women milk Pourers | | | | | | | | | | | | |
|---|---|---|---|---|---|---|---|---|---|---|---|---|
| SL. NO | UNIONS | DISTRICT NAME | | FUNCTIONING DCS | Gereral DCS | Women DCS | TOTAL Registered Members | TOTAL Men Registered Members | TOTAL WOMEN Registered Members | TOTAL ACTIVE Milk Pourers | Active Men Milk Pourers | Active Women Milk Pourers |
| | | 1 | BENGALURU RURAL | 724 | 666 | 58 | 95524 | 46807 | 48717 | 34379 | 22448 | 11931 |
| | | 2 | BENGALURU URBAN | 664 | 592 | 72 | 79270 | 38842 | 40428 | 17664 | 10672 | 6992 |
| | | 3 | RAMANAGARA | 905 | 794 | 111 | 161695 | 79231 | 82464 | 57010 | 31851 | 25159 |
| 1 | BAMUL | | UNION TOTAL | 2293 | 2052 | 241 | 336489 | 164880 | 171609 | 109053 | 64971 | 44082 |
| 2 | BEMUL | 4 | BELAGAVI | 616 | 451 | 165 | 118783 | 58204 | 60579 | 31494 | 18681 | 12813 |
| 3 | CHAMUL | 5 | CHAMARAJANAGARA | 465 | 377 | 88 | 100612 | 49300 | 51312 | 32517 | 20526 | 11991 |
| 4 | CHIMUL | 6 | CHIKKABALLAPURA | 978 | 852 | 126 | 154870 | 75886 | 78984 | 39601 | 24141 | 15460 |
| | | 7 | DHARAWAD | 207 | 84 | 123 | 27210 | 13333 | 13877 | 11973 | 5092 | 6881 |
| | | 8 | GADAG | 202 | 102 | 100 | 27405 | 13428 | 13977 | 7765 | 3378 | 4387 |
| | | 9 | UTTARA KANNADA | 296 | 193 | 103 | 31048 | 15214 | 15834 | 11251 | 7044 | 4207 |
| 5 | DHAMUL | | UNION TOTAL | 705 | 379 | 326 | 85663 | 41975 | 43688 | 30989 | 15514 | 15475 |
| | | 10 | DAKSHINA KANNADA | 406 | 292 | 114 | 84182 | 41249 | 42933 | 29093 | 15952 | 13141 |
| | | 11 | UDUPI | 343 | 243 | 100 | 68802 | 33713 | 35089 | 22878 | 8028 | 14850 |
| 6 | DKMUL | | UNION TOTAL | 749 | 535 | 214 | 152984 | 74962 | 78022 | 51971 | 23980 | 27991 |
| | | 12 | CHIKKAMAGALURU | 277 | 113 | 164 | 40638 | 19913 | 20725 | 15776 | 5685 | 10091 |
| | | 13 | HASSAN | 1410 | 731 | 679 | 204045 | 99982 | 104063 | 84583 | 34269 | 50314 |
| | | 14 | KODAGU | 39 | 22 | 17 | 7012 | 3436 | 3576 | 2419 | 1080 | 1339 |
| 7 | HAMUL | | UNION TOTAL | 1726 | 866 | 860 | 251695 | 123331 | 128364 | 102778 | 41034 | 61744 |
| 8 | HAVEMUL | 15 | HAVERI | 439 | 319 | 120 | 65712 | 32199 | 33513 | 23686 | 15396 | 8290 |
| | | 16 | BIDAR | 253 | 141 | 112 | 60198 | 29497 | 30701 | 5584 | 2312 | 3272 |
| | | 17 | KALBURGI | 168 | 129 | 39 | 25477 | 12484 | 12993 | 4435 | 2461 | 1974 |
| | | 18 | YADGIR | 18 | 6 | 12 | 5192 | 2544 | 2648 | 170 | 55 | 115 |
| 9 | KBYMUL | | UNION TOTAL | 439 | 276 | 163 | 90867 | 44525 | 46342 | 10189 | 4828 | 5361 |
| 10 | KOMUL | 19 | KOLAR | 969 | 850 | 119 | 156817 | 76840 | 79977 | 42358 | 24750 | 17608 |
| 11 | MANMUL | 20 | MANDYA | 1305 | 720 | 585 | 281650 | 138009 | 143642 | 101266 | 41884 | 59382 |
| 12 | MYMUL | 21 | MYSURU | 1218 | 817 | 401 | 224487 | 109999 | 114488 | 103199 | 47113 | 56086 |
| | | 22 | BALLARI | 64 | 13 | 51 | 18792 | 9208 | 9584 | 1385 | 834 | 551 |
| | | 23 | KOPPAL | 273 | 166 | 107 | 36376 | 17824 | 18552 | 11099 | 5070 | 6029 |
| | | 24 | RAICHUR | 131 | 79 | 52 | 20166 | 9881 | 10285 | 3553 | 1729 | 1824 |
| | | 25 | VIJAYANAGARA | 350 | 183 | 167 | 44869 | 21986 | 22883 | 16364 | 7171 | 9193 |
| 13 | RBKVMUL | | UNION TOTAL | 818 | 441 | 377 | 120203 | 58899 | 61304 | 32401 | 14804 | 17597 |
| | | 26 | CHITRADURGA | 342 | 249 | 93 | 41310 | 20242 | 21068 | 19422 | 10127 | 9295 |
| | | 27 | DAVANAGERE | 410 | 246 | 164 | 61828 | 30296 | 31532 | 34806 | 16447 | 18359 |
| | | 28 | SHIVAMOGGA | 571 | 368 | 203 | 67719 | 33182 | 34537 | 35217 | 16357 | 18860 |
| 14 | SHIMUL | | UNION TOTAL | 1323 | 863 | 460 | 170857 | 83720 | 87137 | 89445 | 42931 | 46514 |
| 15 | TUMUL | 29 | TUMAKURU | 1354 | 986 | 368 | 271400 | 132986 | 138414 | 83483 | 46013 | 37470 |
| | | 30 | BAGALKOTE | 350 | 288 | 62 | 60805 | 29794 | 31011 | 15657 | 9529 | 6128 |
| | | 31 | VIJAYAPURA | 140 | 122 | 18 | 25043 | 12271 | 12772 | 4520 | 3228 | 1292 |
| 16 | VIMUL | | UNION TOTAL | 490 | 410 | 80 | 85848 | 42066 | 43782 | 20177 | 12757 | 7420 |
| | GRAND TOTAL | | | 15887 | 11194 | 4693 | 2668937 | 1307779 | 1361158 | 904607 | 459323 | 445284 |